

ಕಣ್ಣೀರು ಯಾರಿಗೂ ಕಾಣುವುದಿಲ್ಲ' ಎಂದು ಚಾಪ್ಲಿನ್ ಹೇಳಿದ್ದ. ವೈದ್ಯರು ತಮ್ಮ ತಲೆತಿನ್ನುವ ಸಮಸ್ಯೆಗಳನ್ನು ತೋಡಿಕೊಳ್ಳುತ್ತಿದ್ದರು. ಆಗ ಮಳೆ ಬರಬಾರದೇ ಎಂದು ನನಗನ್ನಿಸುತ್ತಿತ್ತು. ಆದರೆ, ಈ ಚಿಂತೆಗಳು ಅವರ ವೈಯಕ್ತಿಕವೆಂಬುದು ಅವರಿಗೆ ತಿಳಿದಿತ್ತು. ಬೇಂದ್ರೆಯವರು ಹೇಳಿದಂತೆ 'ಅಳು ನುಂಗಿ ನಗು ಒಮ್ಮೆ' ಎಂಬುದನ್ನು ಅವರು ಶಿರಸಾವಹಿಸಿದ್ದರು.

ಅವರ 'ಹಳ್ಳ ಬಂತು ಹಳ್ಳ' ಕಾದಂಬರಿಯನ್ನು ಪ್ರಕಟಣಾಪೂರ್ವವಾಗಿ ಹಸ್ತಪ್ರತಿಯಲ್ಲಿ ಓದಿದ ಭಾಗ್ಯ ನನ್ನದು. 'ಹರಿವ ನೀರಿದು' ಎಂದು ಹೆಸರಿಟ್ಟಿದ್ದರು. ಅದು (ಗಂಗಾಧರ) ಚಿತ್ತಾಲರ ಕವನ ಸಂಕಲನವೊಂದರ ಹೆಸರು ಎಂದು ಎಚ್ಚರಿಸಿದ್ದೆ. ಮುಂದೆ ಕಾರ್ನಾಡರು ಅದು ಬೇಡವೆಂದು ಹೇಳಿದ್ದರಿಂದ ಪುನರ್ ನಾಮಕರಣವಾದದ್ದು ಪ್ರಾಯಃ ಅದರ ಯಶಸ್ಸನ್ನು ಹೆಚ್ಚಿಸಿತು.

'ಹಳ್ಳ ಬಂತು ಹಳ್ಳ' ಕಾದಂಬರಿ ಪ್ರಕಟವಾದಾಗ ಅದನ್ನು ಇತ್ತೀಚಿನ ವರ್ಷಗಳಲ್ಲಿ ಕಾಣದಂಥ ಅದ್ಭುತ ಬರಹವೆಂದು ಕೆಲವರು ಬಣ್ಣಿಸಿದ್ದರು. 'ಹಳ್ಳ ಬಂತು ಹಳ್ಳ'ವನ್ನು ಕಾರಂತರ 'ಮರಳಿ ಮಣ್ಣಿಗೆ', ರಾವಬಹದ್ದೂರರ 'ಗ್ರಾಮಾಯಣ' ಕಾದಂಬರಿಗೆ ಹೋಲಿಸಲಾಯಿತು. ಆಗ ವೈದ್ಯರು "ನನಗೆ ಯಾಕೋ 'ಹಳ್ಳ...'ವನ್ನು 'ಗ್ರಾಮಾಯಣ'ಕ್ಕೆ, 'ಮರಳಿ ಮಣ್ಣಿಗೆ'ಗೂ ಹೋಲಿಸುವುದೇ ಅಷ್ಟೊಂದು ಸರಿಯಾಗಿ ಕಾಣುವುದಿಲ್ಲ. 'ಹಳ್ಳ ಬಂತು ಹಳ್ಳ'ವನ್ನು ಬರೆಯುವಾಗಲೇ ನಾನು ಇಂತಹ ಅಪಾಯಕಾರಿ ಹೋಲಿಕೆಯನ್ನು ಮುಂಗಂಡಿದ್ದೆ. ಆದರೆ, ತಲೆಮಾರಿನ ಕತೆಗಳೆಲ್ಲ 'ಮರಳಿ ಮಣ್ಣಿಗೆ'ಯಾಗಲಾರವೆಂದು, ಹಳ್ಳಿಯ ವಿಶೇಷತಃ ಉತ್ತರ ಕರ್ನಾಟಕದ ಹಳ್ಳಿಯ ಬದುಕೆಲ್ಲ 'ಗ್ರಾಮಾಯಣ'ವಾಗದೆಂದು ಭರವಸೆಯಿಂದಿದ್ದೆ. 'ಹಬಹ'ದ ಸರಳ ಆಶಯಗಳಾದ: ಒಂದು ಮಹತ್ವದ ಕಾಲಘಟ್ಟದಲ್ಲಾದ ತೀವ್ರಗತಿಯ ಸಾಮಾಜಿಕ ಬದಲಾವಣೆ, ಕರ್ಮಠತೆಯ ಬಿಗಿ ಸಡಿಲುಗೊಳ್ಳುತ್ತಿರುವುದು, ತಲೆಮಾರುಗಳ ತಿಕ್ಕಾಟ, ಇವು ಯಾವುವೂ ನಮ್ಮ ಓದುಗರನ್ನು ತಟ್ಟಿಲ್ಲವೆಂದು ಕಾಣುತ್ತದೆ. ಇದೆಲ್ಲ ಹೇಗೂ ಇರಲಿ. ಅಪರ ವಯಸ್ಸಿನಲ್ಲಿ ಬರೆದ ನನ್ನ ಕೃತಿ ಚರ್ಚೆಗೆ ಒಳಪಟ್ಟಿರುವುದೇ, ನನಗೆ ಸಾಕಷ್ಟು ಸ್ಥೈರ್ಯವನ್ನೂ, ಉತ್ಸಾಹವನ್ನೂ ತಂದುಕೊಟ್ಟಿದೆ'' ಎಂದು ಬರೆದರು.

'ಹಳ್ಳ ಬಂತು ಹಳ್ಳ' ಕೃತಿಯ ಬಗ್ಗೆ ವಸುಧೇಂದ್ರರು ಉತ್ಸಾಹದಿಂದ ಬರೆದಿದ್ದರು. ಅದರಲ್ಲಿದ್ದ